ಓ ಎಸ್ ನಂಃ 224/2019
**ಪಿ ಡಬ್ಲ್ಯೂ ಃ 1**

**ದಿಃ 18.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಜಿ ಎಸ್ ಎಸ್ ವಕೀಲರಿಂದಃ-**

ವಾದಿಗೆ ಆಂಗ್ಲ ಮತ್ತು ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. ನಿಪಿ 1 ರ ಅಧಿಕಾರ ಪತ್ರವನ್ನು ಆಂಗ್ಲ ಭಾಷೆಯಲ್ಲಿ ಬರೆಯಲಾಗಿದೆ ಎಂದರೆ ಸರಿ. ನಿಪಿ 1 ದಾಖಲಾತಿಯಲ್ಲಿ ಬರೆದಿರುವ ಆಂಗ್ಲ ಭಾಷೆಯ ಒಕ್ಕಣೆಯನ್ನು ವಾದಿಗೆ ಆಕೆಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿದೆ ಎಂಬ ವಿಚಾರ ನಮೂದು ಆಗಿಲ್ಲ ಎಂದರೆ ಸರಿ. ನಿಪಿ 1 ಅಧಿಕಾರ ಪತ್ರವು ಕಾನೂನುಬದ್ದವಾಗಿಲ್ಲ ಎಂದರೆ ಸರಿಯಲ್ಲ. ನಿಪಿ 4 ಮತ್ತು 5 ರ ದಾಖಲಾತಿಯಲ್ಲಿ ನಮೂದಾಗಿರುವ ವಿಳಾಸದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. 1982 ರ ಸಾಲಿಗಿಂತ ಪೂರ್ವದಿಂದಲೂ ಸಹ ನನ್ನ ತಾಯಿ ನಿಪಿ 4 ಮತ್ತು 5 ರ ದಾಖಲಾತಿಯಲ್ಲಿ ನಮಾದು ಮಾಡಿರುವ ವಿಳಾಸದಲ್ಲಿ ವಾಸವಾಗಿದ್ದಾರೆ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ತಮಗೆ ಗೊತ್ತಾ ಎಂದರೆ ಸಾಕ್ಷಿಯು ಗೊತ್ತು ಎಂದು ನುಡಿಯುತ್ತಾರೆ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದ 8 ನೇ ಖಂಡಿಕೆಯಲ್ಲಿ ಹೇಳಿ ಬರೆಸಿದ್ದೀರಿ 1 ನೇ ಪ್ರತಿವಾದಿಯು ಅವರ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾದರೂ ಸಹ ಪ್ರತಿವಾದ ಪತ್ರವನ್ನು ಸಲ್ಲಿಸಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯು ದಿಃ 17.12.2020 ರಂದು ಈ ದಾವೆಯಲ್ಲಿ ಅವರ ಪರವಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಹಾಗಾದರೆ ತಾವು ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಸುಳ್ಳು ನುಡಿದಿದ್ದೀರಿ ಎಂದರೆ ಸರಿಯಲ್ಲ. ಈ ದಾವೆಯ ಸಂಗತಿಗಳ ಬಗ್ಗೆ ತಮಗೆ ಗೊತ್ತಿಲ್ಲದಿದ್ದರೂ ಸಹ ತಾವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತು ಯಾವುದರ ಮುಖಾಂತರ ಬಂದಿದೆ ಎಂದು ತೋರಿಸಲು ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಹಕ್ಕು ಪತ್ರವನ್ನು ಹಾಜರುಮಾಡಿದ್ದೇವೆ ಎಂದು ನುಡಿಯುತ್ತಾರೆ. ವಾದಿಯು ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ಹಕ್ಕುಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ಕಂದಾಯ ರಶೀದಿಗಳು ಮತ್ತು ಪಹಣಿ ಪತ್ರಿಕೆಗಳನ್ನು ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ತಾವು ಕಂದಾಯ ರಶೀದಿ ಮತ್ತು ಪಹಣಿ ಪತ್ರಿಕೆಯನ್ನು ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಓ ಎಸ್ ನಂಃ 224/2019
**ಪಿ ಡಬ್ಲ್ಯೂ ಃ 1**

ದಾವಾ 'ಎ' ಷೆಡ್ಯೂಲ್ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 50 ಅಡಿಗಳು, ಉತ್ತರ – ದಕ್ಷಿಣ 30 ಅಡಿಗಳು ಎಂದರೆ ಸರಿಯಲ್ಲ. ತಮ್ಮ ಪ್ರಕಾರ ದಾವಾ 'ಎ' ಷೆಡ್ಯೂಲ್ ಸ್ವತ್ತಿನ ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿಯು 30 X 40 ಎಂದು ಅಡಿಗಳು ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂದಪಟ್ಟಂತೆ ತಾವು ಯಾವುದೇ ದಾಖಲಾತಿಯನ್ನು ಹಾಜರುಪಡಿಸದಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯ ಹೆಸರಿಗೆ ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ 1982 ನೇ ಸಾಲಿನಲ್ಲಿ ಸರ್ಕಾರದಿಂದ ಯಾವುದೇ ಹಕ್ಕು ಪತ್ರವನ್ನು ವಿತರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ 'ಎ' ಷೆಡ್ಯೂಲ್ ಸ್ವತ್ತು ದಿಃ 28.01.1975 ರಲ್ಲಿ ನರಸಯ್ಯರವರ (ಪ್ರತಿವಾದಿ 2) ಹೆಸರಿಗೆ ಸರ್ಕಾರದಿಂದ ಮಂಜೂರಾದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ನಿಪಿ 9 ರ ದಾಖಲಾತಿಯಲ್ಲಿ ಸೈಟ್ ನಂ. 156 ರ ಪಕ್ಕ ನರಸಯ್ಯ ಮುನಿಯಪ್ಪ ಎಂಬ ಹೆಸರುಗಳನ್ನು ರೌಂಡ್ ಅಪ್ ಮಾಡಿ ವೆಂಕಟಮ್ಮ ಎಂಬುದಾಗಿ ಬರೆಯಲಾಗಿದೆ ಎಂದರೆ ಸರಿ. ನಿಪಿ 9 ರ ದಾಖಲಾತಿಯಲ್ಲಿ ದಾವಾ 'ಎ' ಷೆಡ್ಯೂಲ್ ಸ್ವತ್ತಿನ ವಿಸ್ತೀರ್ಣ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 9 ರ ದಾಖಲಾತಿಯನ್ನು ತಾವು ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ದಿಃ 31.12.2011 ರಂದು 2 ನೇ ಪ್ರತಿವಾದಿಯು ದಾವಾ 'ಎ' ಷೆಡ್ಯೂಲ್ ಸ್ವತ್ತನ್ನು 4 ಮತ್ತು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 4 ಮತ್ತು 5 ನೇ ಪ್ರತಿವಾದಿಗಳು ದಾವಾ 'ಎ' ಷೆಡ್ಯೂಲ್ ಸ್ವತ್ತನ್ನು 1 ನೇ ಪ್ರತಿವಾದಿಗೆ ದಿಃ 26.06.2014 ರಂದು ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಸದರಿ ದಾಖಲಾತಿಯನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಈ ಮೇಲ್ಕಂಡ ಎರಡೂ ಕ್ರಯ ಪತ್ರಗಳಲ್ಲಿ ದಾವಾ 'ಎ' ಷೆಡ್ಯೂಲ್ ಸ್ವತ್ತಿನ ಒಟ್ಟು ವಿಸ್ತೀರ್ಣ 1500 ಅಡಿಗಳು ಇದೆ ಎಂದರೆ ಸಾಕ್ಷಿಯು ಅವರು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ 'ಎ' ಷೆಡ್ಯೂಲ್ ಸ್ವತ್ತಿನಲ್ಲಿ 5 ನೇ ಪ್ರತಿವಾದಿಯು ಒಂದು ಶೀಟಿನ ಮನೆಯನ್ನು ಕಟ್ಟಿಸುವ ಸಲುವಾಗಿ ವಿದ್ಯುತ್ಶಕ್ತಿ ಸಂಪರ್ಕ ಪಡೆದುಕೊಳ್ಳುವ ಸಲುವಾಗಿ ವಿದ್ಯುತ್ಶಕ್ತಿ ಮಂಡಳಿಯವರಿಗೆ ಒಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ 'ಎ' ಷೆಡ್ಯೂಲ್ ಸ್ವತ್ತಿನ್ನು 4 ಮತ್ತು 5 ನೇ ಪ್ರತಿವಾದಿಗಳು ಕ್ರಯಕ್ಕೆ ಪಡೆದ ನಂತರ ಅವರ ಹೆಸರಿಗೆ ಖಾತೆ ವರ್ಗಾವಣೆ ಆಗಿದೆ ಎಂದರೆ ಸಾಕ್ಷಿಯು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಆನಂತರ ದಾವಾ 'ಎ' ಷೆಡ್ಯೂಲ್ ಸ್ವತ್ತನ್ನು 1 ನೇ

**ಓ ಎಸ್ ನಂಃ 224/2019**

**ಪಿ ಡಬ್ಲ್ಯೂ ಃ 1**

ಪ್ರತಿವಾದಿ ಕ್ರಯ ಪತ್ರದ ಮೂಲಕ ಖರೀದಿ ಮಾಡಿದ್ದು ಅವರ ಹೆಸರಿಗೆ ಸದರಿ ಸ್ವತ್ತಿನ ಖಾತೆಯು 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಆಗಿದೆ ಎಂದರೆ ಸಾಕ್ಷಿಯು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ 'ಎ' ಷೆಡ್ಯೂಲ್ ಸ್ವತ್ತಿನ ಖಾತೆಯು ಇಲ್ಲಿಯ ತನಕ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಗಳ ಋಣಭಾರ ರಾಹಿತ್ಯ ಪ್ರಮಣ ಪತ್ರಗಳಲ್ಲಿ ನಮೂದಾಗಿದೆ ಎಂದರೆ ಸಾಕ್ಷಿಯು ಅದನ್ನು ಪ್ರತಿವಾದಿಗಳು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯ ಕಾಯಂ ವಿಳಾಸ ಬೆಂಗಳೂರಿನ ಮಾರೇನಹಳ್ಳಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸೇರಿದ ದಾವಾ 'ಎ' ಷೆಡ್ಯೂಲ್ ಸ್ವತ್ತಿನ್ನು ಕಬಳಿಸುವ ಉದ್ದೇಶದಿಂದ ವಾದಿಯು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಿಪಿ 4 ರಿಂದ 6 ರ ದಾಖಲಾತಿಗಳ ಬಗ್ಗೆ ದೂರನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ನಿಪಿ 10 ರಿಂದ 15 ರ ಛಾಯಾಚಿತ್ರಗಳಲ್ಲಿ ಕಾಣಿಸುತ್ತಿರುವ ಮನೆಯನ್ನು 1 ನೇ ಪ್ರತಿವಾದಿಯು ಕಟ್ಟಿಸುತ್ತಿದ್ದರು ಸಹ ಸುಳ್ಳು ಛಾಯಚಿತ್ರಗಳನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ದಾವಾ 'ಎ' ಷೆಡ್ಯೂಲ್ ಸ್ವತ್ತಿನಲ್ಲಿ 1 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ 'ಎ' ಷೆಡ್ಯೂಲ್ ಸ್ವತ್ತಿನ ಅಕ್ಕಪಕ್ಕದ ನಿವೇಶನಗಳ ವಿಸ್ತೀರ್ಣ 1500 ಅಡಿಗಳು ಎಂದರೆ ನನಗೆ ಗೊತ್ತಿಲ್ಲ. ವಾದಿಯು ಯಾವತ್ತೂ ಸಹ ದಾವಾ 'ಎ' ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**